

# ಸ್ವರ್ಗ–ನರಕ

ಒಬ್ಬ ಜೆನ್ ಗುರುವಿನ ಬಳಿಗೆ ಸೈನಿಕನೊಬ್ಬನು ಹೋಗುತ್ತಾನೆ.

"ನಿಜವಾಗಿ ಸ್ವರ್ಗ ನರಕಗಳಿವೆಯೆ?" ಎಂದು ಪ್ರಶ್ನಿಸುತ್ತಾನೆ.

"ಹುಂ. ನೀನು ಯಾರು?" ಗುರು ಪ್ರಶ್ನಿಸಿದ.

"ನಾನೊಬ್ಬ ಸೈನಿಕ."

"ನೀನೊಬ್ಬ ಸೈನಿಕನೆ!? ನೀನೇ ಹೀಗಿರಬೇಕಾದರೆ, ನಿನ್ನ ಅರಸ ಹೇಗಿರಬೇಕು," ಗುರು ಕೆಣಕುವ ಧ್ವನಿಯಲ್ಲಿ ಹೇಳಿದ.

"ಏನೆಂದೆ?"— ಸೈನಿಕನ ಕೋಪ ಏರತೊಡಗಿತು.

"ನಿನ್ನ ಮುಖ ನೋಡಿದರೆ ಭಿಕ್ಷುಕನ ಹಾಗೆ ಕಾಣುತ್ತೀಯಲ್ಲಯ್ಯ!" ಗುರು ವ್ಯಂಗ್ಯವಾಗಿ ನುಡಿದನು.

ಸೈನಿಕನ ಕೋಪ ಈಗ ಮಿತಿ ಮೀರಿತು, "ನಿನ್ನನ್ನು ಕೊಚ್ಚಿಹಾಕುತ್ತೇನೆ" ಎಂದು ತನ್ನ ಒರೆಯಿಂದ ಖಡ್ಗವನ್ನು ಎಳೆದ. ಗುರು ಸ್ವಲ್ಪವೂ ವಿಚಲಿತನಾಗದೆ ಮುಗುಳ್ನಗುತ್ತ ಹೇಳಿದನು: "ಓಹೋ, ನಿನ್ನಲ್ಲಿ ಖಡ್ಗ ಬೇರೆ ಇದೆಯೇ? ನೋಡು, ಅದು ಎಷ್ಟು ಮೊಂಡಾಗಿದೆ, ಅದರಿಂದ ನನ್ನ ತಲೆ ಕತ್ತರಿಸಲಾದೀತೆ?"

"ಆಗುತ್ತದೊ ಇಲ್ಲವೊ ತೋರಿಸುತ್ತೇನೆ" ಎಂದು ಅರ್ಭಟಿಸುತ್ತ, ಕೋಪದಿಂದ ನಡುಗುತ್ತ ಸೈನಿಕನು ಗುರುವಿನೆಡೆಗೆ ನುಗ್ಗಿದನು.

'ನೋಡು, ನೋಡು, ಇದೇ ಆ ನರಕ. ಈಗ ನಿನ್ನ ಪಾಲಿಗೆ ನರಕದ ಬಾಗಿಲು ತೆರೆಯುತ್ತಿದೆ," ಎಂದನು ಗುರು ಶಾಂತಮನಸ್ಕನಾಗಿ.

ಈ ಮಾತನ್ನು ಕೇಳುತ್ತಿದ್ದಂತೆಯೇ ಸೈನಿಕನ ಕೋಪ ತಣ್ಣಗಾಯಿತು, ಖಡ್ಗ ಒರೆಗೆ ಹಿಂತಿರುಗಿತು. ಆಗ ಗುರು ಎಂದ : "ನೋಡು, ನೋಡು, ಇಲ್ಲಿದೆ ಸ್ವರ್ಗ. ಈಗ ಸ್ವರ್ಗದ ಬಾಗಿಲು ನಿನಗಾಗಿ ತೆರೆಯುತ್ತಿದೆ."

**ಕಾಮಕ್ರೋಧಾದಿಗಳೇ ನರಕದ್ವಾರಗಳು.**
**ಪ್ರೀತಿ ಸಹಾನುಭೂತಿಗಳೇ ಸ್ವರ್ಗದ ಬಾಗಿಲು.**

